ತಡವಾಗಬಹುದು. ನಾನು ಮರಳಿ ಹೋಗುತ್ತಲೇ ಅವಳನ್ನು ಅಮೆರಿಕಕ್ಕೆ ಕರೆಸಿಕೊಳ್ಳುವ ವ್ಯವಸ್ಥೆಯನ್ನು ಮಾಡುತ್ತೇನೆ".

ನಾನು ಮರಳಿ ಹೋಗಲು ಏರ್‌ಪೋರ್ಟ್‌ಗೆ ಹೋದಾಗ ನಮ್ಮೆರಡೂ ಪರಿವಾರದ ಸಂಬಂಧಿಕರು ಮತ್ತು ಕೈಲಿ ನನ್ನನ್ನು ವಿಮಾನಕ್ಕೆ ಕೂರಿಸಿ ಹೋಗಲು ಬಂದಿದ್ದರು. ಒಂದು ವೇಳೆ ಕೈಲಿಯೊಂದಿಗೆ ಬೇರಾರೂ ಇರದಿದ್ದರೆ, ಅವಳನ್ನು ತಬ್ಬಿಕೊಳ್ಳುತ್ತಿದ್ದೆ. ನಾವೆಲ್ಲರೂ ಲಾಬಿಯಲ್ಲಿ ಪ್ರವೇಶಿಸುವಾಗ, ನಾನು ಕಣ್ತುಂಬಾ ಕೈಲಿಯನ್ನು ನೋಡಿದೆ, ಅವಳ ಮುಖದಲ್ಲಿ ಉದಾಸೀನತೆಯ ಮೋಡಗಳು ಕವಿಯುತ್ತಿದ್ದವು. ಅವಳ ಕಣ್ಣುಗಳಲ್ಲಿ ಕಣ್ಣೀರಿತ್ತು.

ನಾನು ಅಮೆರಿಕಕ್ಕೆ ಹೋಗಿ ನನ್ನ ಕಂಪನಿಯ ಚೇರ್‌ಪರ್ಸನ್ ಮಿ. ಮಾಗರನ್‌ರನ್ನು ಭೇಟಿಯಾಗಿ ಕೈಲಿಯ ಬಗ್ಗೆ ಹೇಳಿದಾಗ, ಅವರು ನನಗೆ ಹೇಗಾದರೂ ಮಾಡಿ ಅವಳನ್ನು ಅಮೆರಿಕಕ್ಕೆ ಕರೆಸಿಕೊಳ್ಳುವಂತೆ ಹೇಳಿದ್ದರು. ಅವರು ತಮ್ಮ ಕಂಪನಿಯಲ್ಲಿ ಅವಳಿಗೆ ಹದಿನೆಂಟು ತಿಂಗಳ 'ವರ್ಕ್ ಪರ್ಮಿಟ್' ಕೊಡಲು ಒಪ್ಪುತ್ತಾರೆಂಬ ಆಸೆ ಸಹ ಇತ್ತು. ಆದರೆ ಅವರು, ಕೈಲಿಯನ್ನು ಅಮೆರಿಕಕ್ಕೆ ಕರೆಸುವ ಬಗ್ಗೆ 'ಸಮಯಾವಕಾಶ ಸಿಕ್ಕಾಗ ಯೋಚಿಸುತ್ತೇನೆ, ಈ ಬಗ್ಗೆ ಹೇಳುತ್ತೇನೆ' ಎಂದಿದ್ದರು.

ನಾನು ನಿರಾಸೆ ತಾಳಿ ಓರ್ವ ಅಮೆರಿಕನ್ ಸಹಪಾಠಿ ಗೆಳೆಯನಿಂದ ಸಹಾಯವನ್ನು ಬಯಸಿದ್ದೆ. ಅವನೂ ಸಹ ಸಮಯವನ್ನು ವ್ಯರ್ಥವಾಗಿ ತಳ್ಳಿದ. ಒಂದು ದಿನ ಸಂಜೆ ನಾಲ್ಕು ಗಂಟೆಗೆ ಅವನು ಫೋನಿನಲ್ಲಿ ಹೇಳಿದ, "ಪಾಲ್, ನೀನು ಅರ್ಧಗಂಟೆಯ ಅನಂತರ ನನ್ನ ಕಚೇರಿಗೆ ಬಾ". ನಾನು ಯೋಚಿಸಿದೆ; ಕೈಲಿಗೆ ನೌಕರಿ ಕೊಡಿಸುವಾಗ ನನ್ನ ಕೆಲಸ ತಪ್ಪಿದರೆ? ಆದರೆ, ಮಾಗರನ್ ಸಾಹೇಬರು ತುಂಬಾ ಚೆನ್ನಾಗಿ ನಡೆದುಕೊಂಡರು. ಅವರು ನನ್ನನ್ನು ಕುರ್ಚಿಯಲ್ಲಿ ಕೂರಿಸಿ ಹೇಳಿದರು: "ನಾನು ನಿಮಗೆ ಒಳ್ಳೆಯ ಸುದ್ದಿಯನ್ನು ಹೇಳಲು ಕರೆಸಿದ್ದೇನೆ. ನಿಮ್ಮ ಭಾವಿ ಪತ್ನಿಗೆ ಸ್ಥಳೀಯ ವಿಶ್ವವಿದ್ಯಾಲಯದಲ್ಲಿ ವಿಸಿಟಿಂಗ್ ಪ್ರೊಫೆಸರರ ನೌಕರಿ ಸಿಗಬಹುದು. ಅವರು ಕೈಲಿಗೆ ನೇಮಕಾತಿ ಪತ್ರವನ್ನು ಕಳುಹಿಸುತ್ತಾರೆ. ಅವಳು ಎರಡು ವರ್ಷಗಳ ಬಳಿಕ ಬೋಧನೆಯನ್ನು ಆರಂಭಿಸಬಹುದು. ಕೈಲಿ ಕೂಡಲೇ ತನ್ನ ಒಪ್ಪಿಗೆ ಪತ್ರವನ್ನು ಕಳುಹಿಸಲಿ" ಎಂದರು.

ಇದನ್ನು ಕೇಳಿದೊಡನೆಯೇ ಕುಣಿಯಲು ಮನಸ್ಸಾಯಿತು. ಕೆಲಸದಿಂದ ಮರಳಿ ಬರುತ್ತಲೇ ನಾನು ಮೊದಲು ಕೈಲಿಗೆ, ಅನಂತರ ನಮ್ಮ ಪಾಲಕರಿಗೆ ಫೋನ್ ಮಾಡಿದ್ದೆ. ಅವರಿಗೆ ಸಂತಸವಾಗುವುದು ಸಹಜವೇ. ಆದರೆ, ತಂದೆಯವರು ಹೇಳಿದರು, "ನಿನಗೆ ಜಾದೂ ಮಾಡುವುದು ಗೊತ್ತೆ?"

"ಡ್ಯಾಡಿ, ಇಂಥ ವೇಳೆಯಲ್ಲಿ ಜಾದೂ ತಿಳಿಯದಿದ್ದಾಗ್ಯೂ ಅದನ್ನು ಬೇಗ ಕಲಿಯಲೇ ಬೇಕಾಗುತ್ತದೆ." ಎಂದೆ. ನಾವಿಬ್ಬರೂ ನಕ್ಕೆವು.

ಆರು ತಿಂಗಳ ಅನಂತರ ನಾನು 'ನ್ಯೂ ಡೇ' ಕಾಲೋನಿಯಲ್ಲಿ ಮನೆಯೊಂದನ್ನು ಖರೀದಿಸಿದ್ದೆ. ಒಂದು ವಾರ ಬಿಟ್ಟು ನಾನಲ್ಲಿಗೆ ಶಿಫ್ಟ್ ಆದೆ. ನನ್ನ ಮನೆಯ ದಕ್ಷಿಣದಲ್ಲಿ ಎಪ್ಪತ್ತರ ಮಹಿಳೆಯೊಬ್ಬಳು ಒಂಟಿಯಾಗಿ ವಾಸಿಸುತ್ತಿದ್ದಳು. ನನ್ನ ಉತ್ತರದ ದಿಕ್ಕಿನಲ್ಲಿದ್ದ ನೆರೆಮನೆಯವಳು ಸಹ ಒಂಟಿಯಾಗಿದ್ದಳು.

ನಾನು ಮನೆಗೆ ಬಂದು ಎರಡು ದಿನಗಳಷ್ಟೇ ಆಗಿತ್ತು; ನೆರೆಮನೆಯ ಹಿರಿಯ ವೃದ್ಧೆ ನನ್ನನ್ನು ಪರಿಚಯಿಸಿಕೊಳ್ಳಲು ಕೇಕ್‌ನೊಂದಿಗೆ ಬಂದಳು. ಅವಳ ಹೆಸರು ಇಲೇನ್ ಎಂದಾಗಿತ್ತು. ನಾನು ನನ್ನ 'ಪಾಲ್' ಎಂಬ ಚಿಕ್ಕ ಹೆಸರರನ್ನು ಹೇಳಿ ಅವಳಿಗೆ ಧನ್ಯವಾದಗಳನ್ನು ಹೇಳಿದೆ. ನಾನು ಅವಳನ್ನು ಮನೆಯ ಹೊರಗೆ ಬೀಳ್ಕೊಡಲು ಹೊರಟಾಗ, ಅವಳು ಗೋಡೆಗೊರಗಿಸಿ ಇಟ್ಟಿದ್ದ ತನ್ನ ವಾಕಿಂಗ್ ಸ್ಟಿಕ್ ತೆಗೆದುಕೊಂಡಳು. ಅವಳು ಎಡಗಡೆಯಿಂದ ಕುಂಟುತ್ತಿದ್ದಳು. ಅವಳ ಬಲಗಡೆಯ ಭುಜ, ಅವಳ ನಿಯಂತ್ರಣದಲ್ಲಿಲ್ಲದೆ ಜೋತಾಡುತ್ತಿತ್ತು.